ಮನುಷ್ಯನಿಗೆ ನೈಜ ಭರವಸೆ ಸಿಗುತ್ತದೆ. ೨. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಅಭ್ಯುದಯದಲ್ಲಿ ತನ್ನದೇ ಜನಾಂಗದ ಇತಿಹಾಸವನ್ನು ಅನುಸರಿಸಬೇಕು. ಪ್ರಗತಿ ಎಂದರೆ ಇತಿಹಾಸದಿಂದ ಜ್ಞಾನ ಪಡೆಯವುದು ಎಂದರ್ಥ. ೩. ಪ್ರತಿಯೊಬ್ಬ ಸುಶಿಕ್ಷಿತ ವ್ಯಕ್ತಿಯೂ ತನ್ನ ಜನಾಂಗದ ಇತಿಹಾಸದ, ಇಲ್ಲವೇ ಜಾಗತಿಕ ಇತಿಹಾಸದ ಮೂರ್ತರೂಪನಾಗಿದ್ದಾನೆ.

ಭಾರತೀಯರು ಇದನ್ನು ಮಾಡದೇ, 'ಶಿಕ್ಷಣ' ಎಂಬ ಪರಿಕಲ್ಪನೆಯನ್ನು ಕೇವಲ ಪಾಶ್ಚಾತ್ಯ ಆಧುನಿಕ ಸಂಸ್ಕೃತಿಗೆ ಮಾತ್ರವೇ ಕೊಟ್ಟಿದ್ದಾರೆ. ಮಾವು ನೆಡುವ ನೆಲದಲ್ಲಿ ಮುಳ್ಳು ಬೆಳೆಸುವಂತೆ ವೇದಗಳ ನಾಡಿನಲ್ಲಿ ಯೂರೋಪಿನ ಅನುಕರಣೆಯು ಅರ್ಥಹೀನ. ಹಾಗೆಂದು ನಮ್ಮ ಕುಂದುಕೊರತೆಗಳನ್ನು ನಿವಾರಿಸಿಕೊಳ್ಳಬಾರದು ಎಂದಲ್ಲ. ಖಂಡಿತವಾಗಿಯೂ ನಾವು ಹೊರಗಿನಿಂದ ಬಹಳಷ್ಟು ಕಲಿಯುವುದಿದೆ. ಆದರೆ ಐತಿಹಾಸಿಕವಾಗಿ ಪುರಾತನವಾಗಿರುವ ನಮ್ಮ ಸಂಸ್ಕೃತಿಯ ಬಗ್ಗೆ ನಾವು ವಿಶೇಷ ಗೌರವ ತೋರಲೇಬೇಕು. ಭಾರತದಲ್ಲಿ ಮಾತ್ರವೇ ದರಿದ್ರನಿಗೂ ಗೌರವ ಸಲ್ಲುತ್ತದೆ. ಅಂತಹ ದರಿದ್ರನು ಶುಕದೇವನಂತಹ ಮಹಾತ್ಮನಾದರೆ, ರಾಜನಿಗಿಂತಲೂ ಹೆಚ್ಚಿನ ಸಮ್ಮಾನ ಸಿಗುತ್ತದೆ. ಇದು ಜಗತ್ತಿನಲ್ಲಿ ಬೇರೆಲ್ಲೂ ಕಾಣಸಿಗದು.

**ಹಾಗಾದರೆ ನಾವೀಗ ಮಾಡಬೇಕಾದುದೇನು? :** (೧) ಸಾಮಾಜಿಕ ರೀತಿನೀತಿ ಮತ್ತು ಧರ್ಮದ ನಡುವಿನ ಅಗಾಧವಾದ ಅಂತರವನ್ನು ನಾವು ಅರ್ಥಮಾಡಿಕೊಳ್ಳಬೇಕು. ಸಾಮಾಜಿಕ ರೀತಿನೀತಿಯೇ ಧರ್ಮವಲ್ಲ ಎಂದು ತಿಳಿಯಬೇಕು. (೨) ಕೀಳರಿಮೆ, ನಿಷೇಧಾತ್ಮಕ ಚಿಂತನೆ ಮತ್ತು ಶಕ್ತಿಹೀನತೆಗಳ ತ್ಯಾಗಕ್ಕೇ **'ಧೀರತೆ'** ಅಥವಾ **'ಅಗ್ರೆಷನ್'** ಎಂದು ಹೆಸರು. ನಮ್ಮ ಗುರಿಯ ಬಗ್ಗೆ ಸ್ಪಷ್ಟ ಕಲ್ಪನೆಯಾಗುವುದರ ಹೆಸರೇ 'ಕ್ರಾಂತಿ'. ಭಾರತದ ಐತಿಹ್ಯ, ಸಂಸ್ಕೃತಿ, ಧರ್ಮ ಮುಂತಾದವುಗಳು ಮಾತ್ರವೇ ಈ ದೇಶದ ಆದರ್ಶ ಎಂಬುದನ್ನು ನಾವು ನೆನಪಿಡಬೇಕು. (೩) ಮತಾಂತರದ, ಹೊರಗಿನವರ ಆಕ್ರಮಣಗಳ ಭಯದಿಂದ ಹಿಂದೂಗಳಾದ ನಾವು ನಡುಗಬಾರದು. ಈಗಿನ ಹಿಂದೂ ಧೀರೋದಾತ್ತನಾಗಬೇಕು – ಅವನೂ ಒಂದು ಬಗೆಯ 'ಮತಾಂತರ' ಮಾಡಬೇಕು. ಈ 'ಮತಾಂತರ'ದ ಅರ್ಥವೇನು? ಎಲ್ಲೆಡೆಯೂ ಭಾರತದ ಐತಿಹ್ಯಪೂರ್ಣವಾದ ಮಹಾನ್ ಆದರ್ಶವನ್ನು ಹರಡಬೇಕು. ಇದೇ ಹಿಂದೂಗಳ ಕರ್ತವ್ಯ. ಕಲ್ಕಿ ಅವತಾರ ಮತ್ತು ಇತರ ಅವತಾರಗಳನ್ನು ವ್ಯಕ್ತಿಯ ಪ್ರಗತಿಯ ಸಂಕೇತ ಎಂದು ಭಾವಿಸುವುದಾದರೆ, ಈಗ ಹಿಂದೂಗಳಿಗೆ ಕಲ್ಕಿಯಂತೆ ವೀರರಾಗುವ ಸಮಯ ಒದಗಿಬಂದಿದೆ. (೪) ನೆನಪಿರಲಿ. ಹಿಂದೆಯೇ ಹೇಳಿದಂತೆ, 'ಧೀರ'ರಾಗುವುದೆಂದರೆ ಕೊಲ್ಲುವುದು, ಹೊಡೆಯುವುದು, ಬಡಿಯುವುದು ಇತ್ಯಾದಿಯಲ್ಲ. ಹಿಂದೂಧರ್ಮದ ಸನಾತನ ಗೌರವದ ಬಗ್ಗೆ ಹೆಮ್ಮೆತಳೆದು, ಅದರ ಮಹಾನ್ ಆದರ್ಶವನ್ನು ಸರ್ವತ್ರ ಹರಡುವುದು. ಸಧ್ಯದ ಪರಿಸ್ಥಿತಿಯಲ್ಲಿ ಇಡೀ ವಿಶ್ವ ಭಾರತದ ಆಧ್ಯಾತ್ಮಿಕ ಜ್ಞಾನಕ್ಕಾಗಿ ಕಾದುನಿಂತಿದೆ.

ಹಿಂದಿನ ಸಾಂಪ್ರದಾಯಿಕ ತಾತ್ತ್ವಿಕ ಚಿಂತನೆಗಳು 'ಬಹುತ್ವವು ಅಸತ್ಯ, ಏಕವಾಗಿರುವುದೇ ಸತ್ಯ' ಎಂದವು. ರಾಮಕೃಷ್ಣ – ವಿವೇಕಾನಂದರು 'ಬಹುತ್ವ ಮತ್ತು ಏಕತ್ವ – ಎರಡೂ ಸತ್ಯ; ಆದರೆ ಬೇರೆ ಬೇರೆ ಸಮಯದಲ್ಲಿ ಭಿನ್ನ ಭಿನ್ನವಾಗಿ ಕಾಣುತ್ತದೆ ಅಷ್ಟೆ' ಎಂದರು. ಸಚ್ಚಾರಿತ್ರ್ಯವೇ ಆಧ್ಯಾತ್ಮಿಕತೆ! ಸಚ್ಚಾರಿತ್ರ್ಯ! ಹೇಡಿಗಳಂತಾಗದೆ ಕಲ್ಕಿ ಅವತಾರದಂತೆ ಧೀರರಾಗುವುದರ ಹೆಸರೇ 'ಧಾರ್ಮಿಕತೆ'. ಇದೇ ನೈಜ ಚಾರಿತ್ರ್ಯ.

**ಶಕ್ತಿಯ ಪರಿಚಯ :** ಎರಡನೆಯ ಅಧ್ಯಾಯದಲ್ಲಿ ಸೋದರಿ ನಿವೇದಿತಾ ಪರಾಧೀನವಾಗಿ ಕೀಳರಿಮೆಯಿಂದ ತೊಳಲುತ್ತಿದ್ದ ಭಾರತೀಯರಿಗೆ ಅವರ ಶಕ್ತಿಯ ಪರಿಚಯ ಮಾಡಿಸುತ್ತಾರೆ.

೧) ೨೦ನೆಯ ಶತಮಾನದ ಹೊತ್ತಿಗೆ ಭಾರತದ ಹೆಚ್ಚು ಜನರು ಇಂಗ್ಲಿಷ್‌ಭಾಷೆಯನ್ನು ಅದ್ಭುತವಾಗಿ ಮಾತೃಭಾಷೆಯಂತೆಯೇ ಬಳಸುತ್ತಿದ್ದರು. ೧೮೫೮ ರಿಂದ ಭಾರತೀಯರ ಕಣ್ಣೆದುರು ಇದ್ದದ್ದು ಒಂದೇ ಧ್ಯೇಯ, 'ಪಾಶ್ಚಾತ್ಯ ನೂತನ ಭಾವಧಾರೆಯನ್ನು ತನ್ನದೇ ಆಗಿ ಮಾಡಿಕೊಳ್ಳುವುದು.' ಆ ಸಮಯದಲ್ಲಿ, ಮಧ್ಯಯುಗದ ಭಾರತ ಸಮಾಪ್ತವಾಗಿ ಆಧುನಿಕ ಭಾರತದ ಉಗಮವಾಯಿತು.

೨) ಭಾರತೀಯರು ಎಷ್ಟೇ ಶೀಘ್ರವಾಗಿ ಆಧುನಿಕತೆಯ ಕಡೆಗೆ ನಡೆದರೂ, ದಾರಿದ್ರ್ಯ ಮತ್ತು ಪ್ರಾಕೃತಿಕ ವಿಕೋಪಗಳ ಕಾರಣದಿಂದಾಗಿ ಒಂದು ರೀತಿಯ ಹತಾಶೆ ಅವರನ್ನು ಕಾಡುತ್ತಿದೆ. ಅದಕ್ಕೆ ಅವಕಾಶ ನೀಡಬೇಕಾದ್ದಿಲ್ಲ. ಭಾರತ ಈಗ ಎದ್ದೇಳುತ್ತಿದೆ. ಭಾರತದ ಪ್ರಾಚೀನ ಆಧ್ಯಾತ್ಮಿಕ ಸಂಪತ್ತಿನ ಘನತೆ ಜಾಗೃತವಾಗುತ್ತಿದೆ. ಭಾರತದ ಜಾಗೃತಿಯ ಚಿಹ್ನೆಯೇನು? ಭಾರತೀಯರು ಹಿಂತಿರುಗಿ ನೋಡಿದರೆ ಸಾಕು, ಅದು ತಿಳಿದುಬರುತ್ತದೆ.

೩) ೧೮೫೮ ರಿಂದ ಭಾರತ ಆಧುನಿಕ ಯುಗಕ್ಕೆ ಪದಾರ್ಪಣ ಮಾಡಿತು. ಆ ಸಮಯದಲ್ಲಿಯೇ ತನ್ನ ಶತಶತಮಾನಗಳ ಇತಿಹಾಸ ಮತ್ತು ಆಧುನಿಕತೆಗಳನ್ನು ಅದು ಅತಿ ಶೀಘ್ರವಾಗಿ ಏಕತ್ರಗೊಳಿಸಬೇಕಿತ್ತು. ಆದರೆ ಮತ್ತೊಂದು 'ಸಮಸ್ಯೆ' ಎದುರಾಯಿತು. ಅದೆಂದರೆ ಭೌಗೋಳಿಕವಾಗಿ ಇದುವರೆಗೂ ಗೊತ್ತಾಗದಿರುವ ಜಗತ್ತಿನ ಹಲವು ಪ್ರದೇಶಗಳ ಆವಿಷ್ಕಾರ ಮತ್ತು ವಿವಿಧ ಸಂಸ್ಕೃತಿಗಳ ನಡುವಣ ಪರಸ್ಪರ ಸಂಪರ್ಕ. ಹಾಗಾಗಿ, 'ಜ್ಞಾನ' ಎಂದರೆ ಸಾರ್ವತ್ರಿಕ ಜ್ಞಾನ, ಕೂಪಮಂಡೂಕದ ಜ್ಞಾನವಲ್ಲ; 'ಅಜ್ಞಾನ' ಎಂದರೆ ಪ್ರಾದೇಶಿಕತೆ ಎಂಬ ಮನೋಭಾವ ಜನರಲ್ಲಿ ಮೂಡಿತು.

೪) ಜ್ಞಾನವೆಂದರೆ ಸಾರ್ವತ್ರಿಕ ಜ್ಞಾನ, ನಿಜ. ಆದರೆ ಇದರರ್ಥ ಕೇವಲ ಹೊರಜಗತ್ತಿನಿಂದ ಬರುವ ಆಧುನಿಕ ಜ್ಞಾನಕ್ಕೆ ಮಾತ್ರ ಒತ್ತುಕೊಟ್ಟು ನಮ್ಮ ಪ್ರಾಚೀನ ಪಾರಂಪರಿಕ ಸಂಪತ್ತನ್ನು ತ್ಯಜಿಸುವುದು ಎಂದಲ್ಲ. **ಸಂಪೂರ್ಣವಾಗಿ ಯಾರು ರಾಷ್ಟ್ರೀಯನಾಗಿರುತ್ತಾನೋ, ಆತನೇ ನಿಜವಾಗಿಯೂ ಅಂತಾರಾಷ್ಟ್ರೀಯ ದೃಷ್ಟಿಯಲ್ಲಿಯೂ ಕೊಡುಗೆ ನೀಡಬಲ್ಲ.** ಉದಾಹರಣೆಗೆ, ಆಫ್ರಿಕಾದ ಉಗಾಂಡಾ ದೇಶದ ಒಬ್ಬ ಯುವಕ ಯೂರೋಪಿನ ಆಧುನಿಕ ವ್ಯವಸ್ಥೆಗೆ ಮರುಳಾಗಿ, ಅವರಂತೆ ತಿಂದುಂಡು ವೇಷ ಧರಿಸಿ, ತನ್ನವರನ್ನು ಹೀಯಾಳಿಸಿದರೆ ಅಲ್ಲಿನ ಜನರು ನಗುತ್ತಾರೆ, ಅಷ್ಟೆ. ಬೇರೆ ದೃಷ್ಟಿಯಿಂದ ನೋಡುವುದಾದರೆ, ಈ ಯುವಕನು ಕೇವಲ ತನ್ನ ಉಗಾಂಡ ಸಂಸ್ಕೃತಿ, ಚಿಂತನೆಗಳಿಗೆ ಅಂಟಿಕೊಂಡರೆ – ಅದು ಒಂದು ದೃಷ್ಟಿಯಿಂದ ಒಳ್ಳೆಯದಾದರೂ – ವ್ಯರ್ಥವೇ ಆಗುತ್ತದೆ. ಇದರ ಅರ್ಥವೇನು? ವಿಶ್ವಮಾನವನಾಗುವುದು ಅಷ್ಟೊಂದು ಸುಲಭವಲ್ಲ! **ಪ್ರಾಂತೀಯ ಭಾವನೆಯನ್ನು ವಿಶ್ವಭಾವನೆಯಲ್ಲಿ ಏಕೀಕರಿಸುವುದೇ ನಿಜವಾದ ವಿಶ್ವಮಾನವತೆ.** ಮಹತ್ವಪೂರ್ಣ ವಿಷಯ ಏನೆಂದರೆ ನಮ್ಮ ಭೌಗೋಳಿಕ ಪ್ರಜ್ಞೆ ಎಷ್ಟು ಮುಖ್ಯವೋ ಐತಿಹಾಸಿಕ ಪ್ರಜ್ಞೆಯೂ ಅಷ್ಟೇ ಮುಖ್ಯ. ಏಕೆಂದರೆ, ಇತಿಹಾಸವು ಯಾವಾಗಲೂ ಸತ್ಯವನ್ನೇ ಪ್ರತಿಪಾದಿಸುತ್ತದೆ.

೫) **ಹಾಗಾದರೆ ಈಗೇನು ಮಾಡಬೇಕು?** ನಮ್ಮ ಪ್ರಾಚೀನ ಜ್ಞಾನವನ್ನು ಆಧುನಿಕ ಭಾಷೆಯಲ್ಲಿ ಪ್ರಕಟಿಸಬೇಕು. ಪ್ರಾಚೀನ ಜ್ಞಾನ ಆಧುನಿಕ ವಸ್ತ್ರವನ್ನು ಧರಿಸಿಕೊಂಡು ಬರಬೇಕು. ಭಾರತೀಯರೇ ಭಾರತದ ಸಾಂಸ್ಕೃತಿಕ ಇತಿಹಾಸವನ್ನು ಬರೆಯಬೇಕು. ಈಗಿರುವ ಇತಿಹಾಸ (೧೯೦೫ರ ಸಮಯದಲ್ಲಿ ಇದ್ದದ್ದು), ಕೇವಲ ಇಂಗ್ಲಿಷರು ಬರೆದ ಇತಿಹಾಸ. ಈ ಇತಿಹಾಸ ಪ್ರಾರಂಭವಾಗುವುದೇ ವಾರನ್ ಹೇಸ್ಟಿಂಗ್ಸ್‌ನೊಂದಿಗೆ! ಅವನಿಗಿಂತ ಹಿಂದಿನ ಭಾರತದ ಸಂಪೂರ್ಣ ಇತಿಹಾಸ ಕೇವಲ ಒಂದೇ ಒಂದು ಅಧ್ಯಾಯದಲ್ಲಿ ಸಂಕ್ಷಿಪ್ತವಾಗಿ ಮುಗಿದೇಹೋಗುತ್ತದೆ, ಏನಾಶ್ಚರ್ಯ!

೬) ರಣಭೂಮಿಗಳಲ್ಲಿ ಮಡಿದ ರಾಜಾಧಿರಾಜರೂ, ಸೈನಿಕರೂ, ವಿದ್ವಜ್ಜನರೂ, ಸಂತರೂ ಇಂದಿನ ಭಾರತೀಯ ನಾಗರಿಕರ ದುರ್ಬಲ ಜೀವನವನ್ನು ಮೇಲಿನಿಂದ ನೋಡಿ ಅಳುತ್ತಿರಬೇಕು! ಓ ಭಾರತೀಯನೇ, ಮೂರ್ಖನಂತಾಗದೆ ಜ್ಞಾನದ ಆವಿಷ್ಕಾರಕ್ಕಾಗಿ ಹಿಂತಿರುಗಿ ನೋಡು! ಅಯೋಧ್ಯೆಯಿಂದ ಹಸ್ತಿನಾಪುರದವರೆಗೆ, ಇಂದ್ರಪ್ರಸ್ಥದಿಂದ ಪಾಟಲೀಪುತ್ರದವರೆಗೆ, ಉಜ್ಜಯಿನಿಯಿಂದ ದಿಲ್ಲಿಯವರೆಗೆ, ಕಾಂಚೀಪುರದಿಂದ ಅಮರಾವತಿಯವರೆಗೆ, ಎಷ್ಟೆಷ್ಟು ಅದ್ಭುತ ಜಗತ್ತುಗಳು ಅದೃಶ್ಯವಾದವೋ ಮತ್ತು ಎಂತೆಂತಹ ಜ್ಞಾನರಾಶಿ ಎಂತಹ ಅದ್ಭುತರೀತಿಯಲ್ಲಿ ಕೊಡಲ್ಪಟ್ಟಿತೋ, ಅದನ್ನು ನೀನು ತಿಳಿಯಬೇಡವೇ? ಆಧ್ಯಾತ್ಮ, ಕಲೆ, ಶಿಲ್ಪ, ವಾಣಿಜ್ಯ, ಆರ್ಥಿಕತೆ, ನೀತಿ, ಸಾಹಿತ್ಯ – ಈ ಎಲ್ಲ ವಿಷಯಗಳಲ್ಲಿಯೂ ಪ್ರಾಚೀನ ಭಾರತ ನೀಡಿದ ಅಮೋಘ ಕಾಣಿಕೆಗಳನ್ನು ಮತ್ತೊಮ್ಮೆ ನಾವು ಹೊರತರಲೇಬೇಕು. ಇದೇ 'ಅಗ್ರೆಸಿವ್ ಹಿಂದೂಧರ್ಮ' ದ ಅರ್ಥ. **ಕರ್ಮ ಎಂದರೆ ವಿಧಿಯಲ್ಲ, ಹಣೆಬರಹವಲ್ಲ – ಅವಕಾಶ, ಸುವರ್ಣಾವಕಾಶ!**

**ಆತ್ಮಗೌರವದ ಸಮಯ:** ನಿವೇದಿತಾ ಭಾರತದ ಹೃದಯವನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಂಡ ಮಹಾನ್ ನಾರಿ. ಅವರು ನೀಡಿದ ಸಲಹೆಗಳನ್ನು ಭಾರತೀಯರು ಅನುಸರಿಸಿದ್ದರೆ ಈಗ ಮಾಡುತ್ತಿರುವಂತೆ, ಅಜ್ಞಾನವಶರಾಗಿ ಆಧ್ಯಾತ್ಮಿಕತೆಗಾಗಲಿ, ಧರ್ಮಕ್ಕಾಗಲಿ, ಮತ್ತಾವ ವಿಷಯಕ್ಕೇ ಆಗಲಿ, ಅನ್ಯತ್ರ ನೋಡಬೇಕಾಗಿರಲಿಲ್ಲ. ಭಾರತೀಯರು ಒಂದಾಗಿ, ಧೀರರಾಗಿ ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ತೊಡಗಬಹುದಾಗಿತ್ತು. ನಮ್ಮ ಕೀಳರಿಮೆಯಿಂದಾಗಿ ನಾವು ನಮ್ಮನಮ್ಮಲ್ಲಿ ಭೇದವನ್ನು ತಂದುಕೊಂಡೆವು. ಈ ಕಾರಣದಿಂದಾಗಿಯೇ ದೇಶದ ಅವನತಿಯಾಯಿತು. ನಾವು ಆತ್ಮಗೌರವ ತಾಳುವ ವೇಳೆ ಮತ್ತೆ ಈಗ ಮರಳಿ ಬಂದಿದೆ.

ಈಗ ಮತ್ತೊಮ್ಮೆ ಭಾರತ ಜಾಗೃತವಾಗುತ್ತಲಿದೆ. ಈ ಸಂದರ್ಭದಲ್ಲಿ ನಮ್ಮ ಪರಸ್ಪರ ದ್ವೇಷ ಅಸೂಯೆಗಳನ್ನು ಬಿಟ್ಟು ತಲೆಯೆತ್ತಿ ನಿಲ್ಲೋಣ. ಈಗ ಜಗತ್ತೆಲ್ಲವೂ ಭಾರತದೆಡೆಗೆ ನೋಡುತ್ತಿದೆ – ಶಾಂತಿ, ಶಾಶ್ವತ ಆನಂದ ಪಡೆಯುವ ಮಾರ್ಗ ದರ್ಶನಕ್ಕಾಗಿ ಕಾಯುತ್ತಿದೆ. ಈ ಮಾರ್ಗದರ್ಶನ ನೀಡಬೇಕಾದರೆ ಮೊದಲು ನಮ್ಮಲ್ಲಿ ಆತ್ಮವಿಶ್ವಾಸವಿರಬೇಕು; ನಮ್ಮ ಸಂಸ್ಕೃತಿ ಮತ್ತು ನಮಗಿಂತ ಹಿಂದೆ ಆಗಿಹೋದ ಮಹನೀಯರಲ್ಲಿ ಅಪಾರ ಶ್ರದ್ಧೆ ಮೂಡಬೇಕು. ಕಾರಣ, ಅವರು ಅತ್ಯಂತ ಪರಿಶ್ರಮಪಟ್ಟು ನಮಗೆ ನೀಡಿದಂತಹ ಜ್ಞಾನಸಂಪತ್ತು ಜಗತ್ತಿನ ಬೇರೆಲ್ಲೂ ಇಲ್ಲ. ಈ ದೃಷ್ಟಿಯಿಂದ ಭಾರತದಷ್ಟು ಸಂಪದ್ಭರಿತ ವಾದ ದೇಶ ಈ ಜಗತ್ತಿನಲ್ಲೇ ಇಲ್ಲ. ನಿವೇದಿತಾರ ಈ ಕೆಳಗಿನ ಮಾತುಗಳಲ್ಲಿ ಅವರ ಮನದಾಳದ ಆಶಯ ಮಡುಗಟ್ಟಿದೆ :

**"Strong as the thunderbolt, austere as a brahmachari, great hearted and selfless, such should be that sanyasin who has taken the service of others as his sanyas, and not less than this should be the son of a militant Hinduism"**

"ಇತರರ ಸೇವೆಯಲ್ಲಿ ನಿರತನಾಗುವುದನ್ನೇ ತನ್ನ ಸಂನ್ಯಾಸಧರ್ಮವನ್ನಾಗಿ ಸ್ವೀಕರಿಸಿದ ಸಾಧುವು ಮಿಂಚಿನಂತೆ ಶಕ್ತಿಯುತನಾಗಿರುತ್ತಾನೆ; ಬ್ರಹ್ಮಚಾರಿಯಂತೆ ತಪಸ್ವೀ ಜೀವನವನ್ನು ನಡೆಸುತ್ತಾನೆ; ಅದರೊಂದಿಗೆ ಉದಾರಹೃದಯನೂ, ನಿಃಸ್ವಾರ್ಥಿಯೂ ಆಗಿರುತ್ತಾನೆ. ಹಿಂದೂಧರ್ಮದ ವೀರಪುತ್ರನೊಬ್ಬನು ಹೀಗೆಯೇ ಇರಬೇಕಲ್ಲವೇ?" ✦



# ನವಯುಗದ ನೂತನ ಮಾನವ : ಶ್ರೀರಾಮಕೃಷ್ಣ

ಸ್ವಾಮಿ ಭಜನಾನಂದ

(ಹಿಂದಿನ ಸಂಚಿಕೆಯಿಂದ)

**ಭಾವನೆಗಳಿಗಿರುವ ಬಲ:** ವಿಕ್ಟರ್ ಹ್ಯೂಗೊ ೧೯ ನೆಯ ಶತಮಾನದ ಪ್ರಸಿದ್ಧ ಕಾದಂಬರಿಕಾರ ಮತ್ತು ಚಿಂತಕ. ಅವನು ಹೀಗೆ ಹೇಳುತ್ತಾನೆ: "ಈ ಜಗತ್ತಿನಲ್ಲಿ, ಯಾವುದಕ್ಕೆ ಕಾಲ ಒದಗಿಬಂದಿದೆಯೋ, ಆ ಭಾವನೆಗಿಂತ ಪ್ರಭಾವಶಾಲಿಯಾದುದು ಬೇರೆ ಏನೂ ಇಲ್ಲ" ಎಂದು. ಜ್ಞಾನದ ಒಂದು ತುಣುಕು ಭಾಷೆಯ ರೂಪವನ್ನು ತಳೆಯುವುದನ್ನೇ ನಾವು 'ಭಾವನೆ' ಎನ್ನುತ್ತೇವೆ. ಭಾವನೆಗಳನ್ನು ತರ್ಕಬದ್ಧವಾಗಿ ಅಭಿವ್ಯಕ್ತಿಗೊಳಿಸುವುದೇ 'ತರ್ಕ'. ಪ್ರಾಣಿಗಳಿಗೆ ಮಾರ್ಗದರ್ಶನ ಮಾಡುವುದು ಅವುಗಳಿಗೆ ಸಹಜವಾಗಿ ಇರುವ 'ಸಂವೇದನೆ'ಗಳು. ಮನುಷ್ಯರಿಗೆ ಮಾರ್ಗದರ್ಶಕಗಳಾಗಿ ಇರುವುದು 'ಭಾವನೆಗಳು'. ಇತಿಹಾಸದ ಗತಿಯನ್ನು ನಿರ್ಧರಿಸುವಲ್ಲಿ ಭಾವನೆಗಳು ಪ್ರಮುಖ ಪಾತ್ರ ವಹಿಸುತ್ತವೆ ಎಂದು ಹೆಗೆಲ್, ಟಾಯನ್‌ಬಿ ಮುಂತಾದ ತತ್ತ್ವಶಾಸ್ತ್ರಜ್ಞರು ತೋರಿಸಿಕೊಟ್ಟಿದ್ದಾರೆ. ಒಂದರ್ಥದಲ್ಲಿ ಮಾನವ ಇತಿಹಾಸವನ್ನು ಭಾವನೆಗಳ ಇತಿಹಾಸವೆಂದೂ ಪರಿಗಣಿಸಬಹುದು. ಆದರೂ, ಭಾವನೆಗಳ ವ್ಯಾಪಕ ತಿಳಿವಳಿಕೆ ಬರೀ ಮೇಲುನೋಟದ್ದು. ಹೀಗಾಗಿ ಭಾವನೆಗಳ ಆಳವಾದ ಅರಿವು ಮಾಡಿಕೊಳ್ಳಬೇಕಾದರೆ, ಮಹಾನ್ ಚಿಂತಕರ ಅಭಿಪ್ರಾಯಗಳನ್ನು ಅಧ್ಯಯನ ಮಾಡುವುದು ಅತ್ಯವಶ್ಯಕ.

ಕ್ರಿಸ್ತಪೂರ್ವ ನಾಲ್ಕನೆಯ ಶತಮಾನದಲ್ಲಿ ಗ್ರೀಕ್ ತತ್ತ್ವಶಾಸ್ತ್ರಜ್ಞನಾದ ಪ್ಲೇಟೋ, 'ಭಾವನೆ'ಗಳು ಮಾನವ ಮನಸ್ಸುಗಳು ಮತ್ತು ಬಾಹ್ಯವಸ್ತುಗಳಿಗಿಂತ ಸ್ವತಂತ್ರವಾದ ಅಸ್ತಿತ್ವವುಳ್ಳವು ಎಂಬ ವಾದವನ್ನು ಮುಂದಿಟ್ಟ. ವಿಶ್ವದ ಪ್ರತಿಯೊಂದು ವಸ್ತುವೂ ಯಾವುದೋ ಒಂದು ಚಿರಂತನವಾದ ಭಾವನೆ, ಸ್ವರೂಪ ಅಥವಾ ಮೂಲಪ್ರತಿಯ ನಕಲು ಅಥವಾ ಛಾಯೆ ಮಾತ್ರ ಎಂದು ಅವನ ಅಭಿಪ್ರಾಯ. ಈ ಮೂಲಭಾವನೆಯನ್ನು ಸಾಧಾರಣ ರೀತಿಯ ಆಲೋಚನೆಯಿಂದ ನೋಡಲಾಗದು, ತಿಳಿಯಲಾಗದು. ಈ ಎಲ್ಲ ಭಾವನೆಗಳೂ ಸುಸಜ್ಜಿತವಾದ, ತರ್ಕಬದ್ಧವಾದ, ನಿತ್ಯವಾದ 'ಲೋಗೋಸ್' (Logos) ಎಂಬ ಹೆಸರಿನ ಒಂದು ವ್ಯವಸ್ಥೆಯಲ್ಲಿ ಅಡಕವಾಗಿವೆ. ಇದೇ ನೈಜ ತರ್ಕದ ಆಧಾರಶಿಲೆಯಾಗುತ್ತದೆ. ಅರಿಸ್ಟಾಟಲ್ ಪ್ಲೇಟೋವಿನ ಶಿಷ್ಯ. ಅವನು ಪ್ಲೇಟೋವಿನ "ಭಾವನೆ'ಗಳ ಅಸ್ತಿತ್ವವನ್ನು ತಿರಸ್ಕರಿಸಿದ; ಬಾಹ್ಯವಸ್ತುಗಳು ನೈಜವಾದುವು ಎಂದು ಪ್ರತಿಪಾದಿಸಿದ. ಅಂದಿನಿಂದ ಪಾಶ್ಚಾತ್ಯ ತತ್ತ್ವಶಾಸ್ತ್ರಜ್ಞರಲ್ಲಿ ಎರಡು ಗುಂಪುಗಳಾಯಿತು. ಧ್ಯೇಯವಾದಿಗಳು ಸತ್ಯತತ್ತ್ವವೆಂದರೆ ಭಾವನೆಗಳೇ ಆಗಿವೆ ಎಂಬ ಪ್ಲೇಟೋವಿನ ವಾದವನ್ನು ಬೆಂಬಲಿಸುತ್ತಾರೆ. ವಾಸ್ತವಿಕವಾದಿಗಳು ಸತ್ಯತತ್ತ್ವವೆಂದರೆ, ಈ ಜಗತ್ತಿನಲ್ಲಿ ಕಾಣಬರುವ ಬಾಹ್ಯವಸ್ತುಗಳೇ ಎಂದು ಅಭಿಪ್ರಾಯಪಡುತ್ತಾರೆ.

ಭಾರತೀಯ ತತ್ತ್ವಶಾಸ್ತ್ರವನ್ನು ನೋಡುವುದಾದರೆ, ಕ್ರಿಸ್ತಪೂರ್ವ ಮೂರನೆಯ ಶತಮಾನದಲ್ಲಿ ಭರ್ತೃಹರಿ ಎಂಬ ದಾರ್ಶನಿಕನು ಮನಸ್ಸಿಗಿಂತ ಭಿನ್ನವಾಗಿ ಜ್ಞಾನ ಇರಬಲ್ಲುದು ಎಂಬ ಸಿದ್ಧಾಂತವನ್ನು ಮೊಟ್ಟಮೊದಲ ಬಾರಿಗೆ ಹುಟ್ಟುಹಾಕಿದನು. 'ಸ್ಫೋಟಗಳು' ಎಂಬ ಸ್ವತಂತ್ರ ಘಟಕಗಳಾಗಿ ಜ್ಞಾನವು ಇರುತ್ತದೆ ಎಂದು ಅವನ ವಾದ. ಪದಗಳು ಮತ್ತು ವಾಕ್ಯಗಳು ಜ್ಞಾನವನ್ನು ಸಂಕೇತಿಸುತ್ತವೆ. ಅವುಗಳ ಕೆಲಸವೇನೆಂದರೆ, ಜ್ಞಾನಘಟಕವಾದ ಈ ಸ್ಫೋಟವನ್ನು ಪ್ರಕಟಗೊಳ್ಳುವಂತೆ ಮಾಡುವುದು. ಪದಗಳು ಸತ್ಯವಲ್ಲ; ಅವು ನಾಶವಾಗುವಂಥವು. ಆದರೆ ಸ್ಫೋಟವು ಅವಿನಾಶಿ ಮತ್ತು ನಿತ್ಯವಾದುದು. ಹಾಗೆಯೇ ಪ್ರತಿಯೊಂದು ವ್ಯಕ್ತಿಗತ ಸ್ಫೋಟವೂ ಸಾರ್ವತ್ರಿಕ ಸ್ಫೋಟದ ಒಂದು ಭಾಗವೇ ಆಗಿದೆ. ಆ ವಿಶ್ವಾತ್ಮಕ ಸ್ಫೋಟವನ್ನೇ 'ಶಬ್ದಬ್ರಹ್ಮ' ಎಂದು ಕರೆಯುವುದು.

ಈ ಸ್ಫೋಟಸಿದ್ಧಾಂತವನ್ನು ಮೀಮಾಂಸಕರು ತಿರಸ್ಕರಿಸುತ್ತಾರೆ. ಇದಕ್ಕೆ ವಿರುದ್ಧವಾಗಿ ವರ್ಣಗಳು ಮತ್ತು ಪದಗಳು ಚಿರಂತನ ವಾದುವು ಎಂದು ಪ್ರತಿಪಾದಿಸುತ್ತಾರೆ. ವೇದಾಂತಿಗಳು ಕೂಡ ಸ್ಫೋಟವಾದವನ್ನು ಅಲ್ಲಗಳೆಯುತ್ತಾರೆ. ಅದ್ವೈತಿಗಳ ಪ್ರಕಾರ, ಬ್ರಹ್ಮ ಮಾತ್ರವೇ ನಿತ್ಯವಾದ ವಸ್ತು. ವರ್ಣಗಳು ಮತ್ತು ಪದಗಳು ಪ್ರತಿಯೊಂದು 'ಕಲ್ಪ' ಅಂದರೆ ಸೃಷ್ಟಿಚಕ್ರದಲ್ಲಿಯೂ ಹೊಸದಾಗಿ ಸೃಷ್ಟಿಯಾಗುತ್ತವೆ. ಈ ಅರ್ಥದಲ್ಲಿ ಮಾತ್ರ ಅವನ್ನು ನಿತ್ಯವೆಂದು ಪರಿಗಣಿಸಬಹುದು. ಏಕೆಂದರೆ, ಹಿಂದಿನ ಕಲ್ಪದಲ್ಲಿ ಸೃಷ್ಟಿ ಯಾದಂತೆಯೇ, ಅವುಗಳ ಪ್ರತಿಕೃತಿಯಂತೆಯೇ, ಮುಂದಿನ ಚಕ್ರದಲ್ಲಿಯೂ ಅವು ಉಗಮಗೊಳ್ಳುತ್ತವೆ. ಹಾಗೆಯೇ ವೇದಾಂತಿಗಳ ಪ್ರಕಾರ ಜ್ಞಾನವು ಮನಸ್ಸಿನಲ್ಲಿ ಇರುತ್ತದೆಯೇ ಹೊರತು ಅದಕ್ಕೆ ಸ್ವತಂತ್ರವಾದ ಅಸ್ತಿತ್ವವಿಲ್ಲ. ಆತ್ಮವೇ ಪ್ರಜ್ಞೆ ಅಥವಾ ಅರಿವಿನ ಆತ್ಯಂತಿಕ ಆಕರವಾಗಿದೆ. ಆದರೆ ಯಾವುದನ್ನಾದರೂ ತಿಳಿದುಕೊಳ್ಳಲು 'ವೃತ್ತಿ' ಅಥವಾ ಮನಸ್ಸಿನ ವಿಕಾರಗಳ ಮಾಧ್ಯಮ ಅತ್ಯವಶ್ಯಕ. ಈ ವೃತ್ತಿಗಳನ್ನು ಆತ್ಮಜ್ಯೋತಿಯು ಬೆಳಗುವುದನ್ನೇ ನಾವು 'ಜ್ಞಾನ'ವೆಂದು ಕರೆಯುತ್ತೇವೆ. ಇಂದ್ರಿಯಗಳ ಅನುಭವದಿಂದ, ಪುಸ್ತಕಗಳ ಅಧ್ಯಯನದಿಂದ ಅಥವಾ ಸ್ವತಂತ್ರ ಆಲೋಚನೆಯಿಂದಲೂ ಈ ವೃತ್ತಿಗಳು ಹುಟ್ಟಬಹುದು.

ವೃತ್ತಿಗಳಲ್ಲಿ ಎರಡು ವಿಧ: ೧. **ನಾಮವೃತ್ತಿ** – ಇದು ಪದಗಳನ್ನು ಉಂಟುಮಾಡುತ್ತದೆ. ೨. **ರೂಪವೃತ್ತಿ** – ಇದು ಮನಸ್ಸಿನಲ್ಲಿ ವಿವಿಧ ರೀತಿಯ ಚಿತ್ರಣಗಳನ್ನು ಮೂಡಿಸುತ್ತದೆ. ಈ ವೃತ್ತಿಗಳಿಂದ ಉಂಟಾಗುವ ಜ್ಞಾನವೇ ಭಾವನೆಗಳಾಗಿ ಹೊರಹೊಮ್ಮುತ್ತದೆ.

ಇತ್ತೀಚಿನ ವರ್ಷಗಳಲ್ಲಿ ಭಾವನೆಗಳು ಎಲ್ಲ ಕ್ಷೇತ್ರಗಳಲ್ಲಿಯೂ ಅತ್ಯಂತ ಮಹತ್ವವನ್ನು ಪಡೆದುಕೊಂಡಿವೆ. ಇದಕ್ಕೆ ಒಂದು ಕಾರಣವೆಂದರೆ, ಈಗ ಸಂಭವಿಸುತ್ತಿರುವ ವಿದ್ಯುನ್ಮಾನ ಕ್ರಾಂತಿಯಿಂದ ಉಂಟಾಗಿರುವ ಜ್ಞಾನವಿಸ್ಫೋಟ. ಪ್ರಪಂಚದಾದ್ಯಂತ ಅನೇಕ ದೇಶಗಳು 'ಕೃಷಿ ಆಧಾರಿತ ಸಮಾಜ' ಅಥವಾ 'ಉದ್ಯಮ ಆಧಾರಿತ ಸಮಾಜ' ದಿಂದ 'ಜ್ಞಾನ ಆಧಾರಿತ ಸಮಾಜ'ಗಳಾಗುವ ಕಡೆಗೆ ಸಾಗುತ್ತಿವೆ. ಇದಕ್ಕೆ ಭಾರತವೂ ಹೊರತಲ್ಲ, ಅದು ಕೂಡ 'ಕೃಷಿ ಆಧಾರಿತ ಆರ್ಥಿಕವ್ಯವಸ್ಥೆ' ಯಿಂದ 'ಜ್ಞಾನ ಆಧಾರಿತ ಆರ್ಥಿಕವ್ಯವಸ್ಥೆ' ಯಾಗಿ ಒಂದು ದೊಡ್ಡ ನೆಗೆತವನ್ನೇ ಕಂಡಿದೆ. ಜ್ಞಾನ ಆಧಾರಿತ ಸಮಾಜದಲ್ಲಿ ಭಾವನೆಗಳಿಗಿಂತ ಮುಖ್ಯವಾದುದು ಬೇರೊಂದಿರುವುದಿಲ್ಲ. ಹೀಗಾಗಿ ನವೀನತೆ ಮತ್ತು ಸೃಜನಾತ್ಮಕತೆಗಳು ವರ್ತಮಾನ ಕಾಲದ ಶಿಕ್ಷಣದ ಮಹತ್ವದ ಅಂಶಗಳಾಗಿ ಪರಿಣಮಿಸಿವೆ.

ಇತ್ತೀಚಿನ ವರ್ಷಗಳಲ್ಲಿ ಭಾವನೆಗಳ ಮಹತ್ವಕ್ಕೆ ಕೊಡುಗೆ ನೀಡಿರುವ ಇನ್ನೊಂದು ಅಂಶವೂ ಇದೆ. ಅದೊಂದು ನೂತನ ವಿಧಾನದ ಚಿಂತನೆ. ಈ ಬಗೆಯ ಆಲೋಚನೆಯು ಭಾವನೆಗಳು, ಪರಿಕಲ್ಪನೆಗಳು, ಮೌಲ್ಯಗಳು ಮತ್ತಿತರ ಸಾಂಸ್ಕೃತಿಕ ಮಾಹಿತಿಯ ಭಾಗಗಳನ್ನು 'ಮೀಮ್' (meme) ಎಂಬ ಸ್ವಯಂಪ್ರಸರಣ ಘಟಕಗಳನ್ನಾಗಿ ಪರಿಗಣಿಸುತ್ತದೆ. ಮಾನವನ ಅಂಗಾಂಶದಲ್ಲಿರುವ ಕ್ರೋಮೋಸೋಮ್‌ಗಳಲ್ಲಿ ಅಡಕವಾಗಿರುವ 'ಜೀನ್'ಗಳಿಗೆ ಅವುಗಳನ್ನು ಹೋಲಿಸಬಹುದು. ಮಾನವ ಶರೀರದಲ್ಲಿರುವ ಜೀನ್ ಒಂದು ಜೀವಿಯ ಭೌತಿಕ ಲಕ್ಷಣಗಳನ್ನು ನಿರ್ಧರಿಸುತ್ತದೆ. ಇದೇ ರೀತಿ 'ಮೀಮ್' ಗಳು ಒಬ್ಬ ಮಾನವಜೀವಿಯ ಭಾವನೆಗಳು, ನಂಬಿಕೆಗಳು ಹಾಗೂ ಸಂಸ್ಕೃತಿಯನ್ನು ನಿರ್ಧರಿಸುತ್ತವೆ. ಇದಲ್ಲದೆ, ಜೀನ್‌ಗಳ ಹಾಗೆ ಮೀಮ್‌ಗಳೂ ಕೂಡ ಡಾರ್ವಿನ್ ಪ್ರತಿಪಾದಿಸಿದ ಜೀವಿಗಳ ನಡುವಣ ವೈವಿಧ್ಯತೆ, ಸ್ಪರ್ಧೆ ಮತ್ತು ನೈಸರ್ಗಿಕ ಆಯ್ಕೆಯ ನಿಯಮಗಳನ್ನು ಪಾಲಿಸುತ್ತವೆ ಎಂದು ನಂಬಲಾಗಿದೆ. ಜೀನ್‌ಗಳು ಸಂಕೀರ್ಣರೂಪದಲ್ಲಿ ಬೆಸೆದುಕೊಂಡು, ಮಾನವನ ಭೌತಿಕ ಲಕ್ಷಣಗಳನ್ನು ನಿರ್ಧರಿಸುತ್ತವೆ; ಹಾಗೆಯೇ ಮೀಮ್‌ಗಳು 'ಮೀಮ್ ಸಂಕೀರ್ಣ'ಗಳಾಗಿ ಕೂಡಿಕೊಂಡು, ಒಂದು ಸಂಸ್ಕೃತಿಯ ಸ್ವಭಾವವನ್ನು ನಿರ್ಧರಿಸುತ್ತವೆ. ಜೀನ್‌ಗಳ ಅಧ್ಯಯನವಾದ 'ಜೆನೆಟಿಕ್ಸ್' ನಂತೆಯೇ ಸಮಾಜವಿಜ್ಞಾನದ ಒಂದು ಹೊಸ ಅಂಗವಾಗಿ ಮಿಮೆಟಿಕ್ಸ್ (memetics) ಎಂಬ ವಿಭಾಗವೂ ಅಸ್ತಿತ್ವಕ್ಕೆ ಬಂದಿದೆ.

**ಸ್ವಾಮಿ ವಿವೇಕಾನಂದರ 'ಯುಗಾಂತರ ಪರಿಕಲ್ಪನೆ'** : ಸ್ವಾಮಿ ವಿವೇಕಾನಂದರ ದೊಡ್ಡ ಕೊಡುಗೆಯೆಂದರೆ, ಭರ್ತೃಹರಿಯ 'ಸ್ಫೋಟ' ಮತ್ತು 'ಶಬ್ದಬ್ರಹ್ಮ'ದ ಪರಿಕಲ್ಪನೆಗಳೊಂದಿಗೆ 'ಹಿರಣ್ಯಗರ್ಭ'ವೆಂಬ ವೇದಾಂತದ ಪರಿಕಲ್ಪನೆಯನ್ನೂ, 'ಮಹತ್' ಎಂಬ ಸಾಂಖ್ಯಶಾಸ್ತ್ರದ ಪರಿಕಲ್ಪನೆಯನ್ನೂ ಮತ್ತು ಗ್ರೀಕ್ ತತ್ತ್ವಶಾಸ್ತ್ರಜ್ಞರ 'ಲೋಗೋಸ್' ಎಂಬ ಭಾವನೆಯನ್ನೂ ಸಮನ್ವಯ ಗೊಳಿಸಲು ಮತ್ತು ಒಗ್ಗೂಡಿಸಲು ಪ್ರಯತ್ನಪಟ್ಟಿದ್ದು. ಭಕ್ತಿಯೋಗದ ಮೇಲಿನ ತಮ್ಮ ಭಾಷಣದಲ್ಲಿ ಸ್ವಾಮೀಜಿ ಹೀಗೆ ಹೇಳು ತ್ತಾರೆ: ಬ್ರಹ್ಮ, ಹಿರಣ್ಯಗರ್ಭ ಅಥವಾ ಮಹತ್ ಆದಿಯಲ್ಲಿ ಮೊದಲು ನಾಮದಂತೆ ವ್ಯಕ್ತವಾಗಿ ಅನಂತರ ವಿಶ್ವದ ರೂಪ ಧರಿಸಿತು. ವ್ಯಕ್ತವಾಗಿರುವ ಇಂದ್ರಿಯವೇದ್ಯವಾದ ಪ್ರಪಂಚವೆಲ್ಲ ರೂಪ ಎನಿಸಿಕೊಳ್ಳುತ್ತದೆ. ಅದರ ಹಿಂದೆ ಸನಾತನ ಅವ್ಯಕ್ತಸ್ಫೋಟ ಅಥವಾ ಅದನ್ನು ಹೊರಗೆಡಹುವ ಶಬ್ದಬ್ರಹ್ಮವಿದೆ. ನಿತ್ಯವಾದ ಸ್ಫೋಟವೇ ಎಲ್ಲ ನಾಮಗಳ ಮುಖ್ಯವಾದ ಅಂತ್ಯವಿಲ್ಲದ ಮೂಲವಸ್ತು. ಈ ಶಕ್ತಿಯ ಮೂಲಕವಾಗಿಯೇ ಈಶ್ವರನು ಪ್ರಪಂಚವನ್ನು ಸೃಷ್ಟಿಸುತ್ತಾನೆ. ಅದೂ ಅಲ್ಲ. ಮೊದಲಿಗೆ ಈಶ್ವರನೇ ಸ್ಫೋಟವಾಗಿ ಉಪಾಧಿಗೆ ಒಳಗಾಗಿ ಅನಂತರ ಮತ್ತೂ ಸ್ಥೂಲವಾದ ಇಂದ್ರಿಯಗಳಿಗೆ ಗೋಚರವಾದ ವಿಶ್ವದಂತೆ ವಿಕಾಸ ಹೊಂದುವನು (ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂಪುಟ ೧, ಪುಟ ೨೮೯).

ವೇದಾಂತದಲ್ಲಿ 'ವ್ಯಕ್ತಿ' ಮತ್ತು 'ವಿಶ್ವ' ಗಳನ್ನು ಕ್ರಮವಾಗಿ 'ಪಿಂಡಾಂಡ' (Microcosm) ಮತ್ತು 'ಬ್ರಹ್ಮಾಂಡ' (Macrocosm) ಎಂದು ಹೆಸರಿಸುತ್ತಾರೆ. ಅವೆರಡೂ ಸ್ವರೂಪ ಮತ್ತು ಕಾರ್ಯದ ದೃಷ್ಟಿಯಿಂದ ಒಂದೇ ಸ್ತರದಲ್ಲಿ ರಚಿಸಲ್ಪಟ್ಟಿವೆ ಎಂದೂ ವೇದಾಂತವು ಪ್ರತಿಪಾದಿಸುತ್ತದೆ. ವ್ಯಕ್ತಿಗಳ ಮನಸ್ಸುಗಳಲ್ಲಿ ಉದ್ಭವವಾಗುವ ಆಲೋಚನೆಯ ಕಂಪನ ಗಳು ರೇಡಿಯೋ ಅಲೆಗಳಂತೆ ಪಯಣಿಸುತ್ತವೆ; ಮಿಕ್ಕ ಮನಸ್ಸುಗಳ ಮೇಲೆಯೂ ಪ್ರಭಾವ ಬೀರುತ್ತವೆ. ಹಾಗೆ ನೋಡಿದರೆ, ಪ್ರತಿಯೊಬ್ಬ ವ್ಯಕ್ತಿ ಒಂದು ಪ್ರಸರಣಕೇಂದ್ರವೂ ಆಗಿದ್ದಾನೆ ಮತ್ತು ಅದೇ ಸಮಯದಲ್ಲಿ ರೇಡಿಯೋ ಅಲೆಗಳ ಸ್ವೀಕರಣಕೇಂದ್ರವೂ ಆಗಿದ್ದಾನೆ. ಇದನ್ನು ಕುರಿತು ಸ್ವಾಮೀಜಿ ಹೀಗೆ ಹೇಳುತ್ತಾರೆ: "ಒಳ್ಳೆಯ ಮತ್ತು ಕೆಟ್ಟ ಆಲೋಚನೆ ಗಳೆರಡರಲ್ಲಿಯೂ ಶಕ್ತಿಯು ಸುಪ್ತವಾಗಿದೆ, ಇವು ಪ್ರಪಂಚವನ್ನೆಲ್ಲಾ ತುಂಬುವವು. ಚಿಂತನೆಗಳು ಕ್ರಿಯಾರೂಪಕ್ಕೆ ಬರುವವ ರೆಗೂ ಚಿಂತನೆಗಳಾಗಿಯೇ ಉಳಿದಿರುತ್ತವೆ. ಉದಾಹರಣೆಗೆ ಒಬ್ಬನು ಏಟನ್ನು ಕೊಡುವವರೆಗೆ ಎಂದರೆ, ಶಕ್ತಿಯನ್ನು ಕ್ರಿಯೆ ಯಾಗಿ ಮಾರ್ಪಡಿಸುವವರೆಗೆ, ಅವನ ಬಾಹುಗಳಲ್ಲಿ ಶಕ್ತಿಯು ಸುಪ್ತವಾಗಿರುತ್ತದೆ. ನಾವು ಒಳ್ಳೆಯ ಮತ್ತು ಕೆಟ್ಟ ಆಲೋಚನೆ ಗಳಿಗೆ ಹಕ್ಕುದಾರರು. ನಾವು ಪರಿಶುದ್ಧರಾಗಿ ಒಳ್ಳೆಯ ಆಲೋಚನೆಗಳನ್ನು ಸ್ವೀಕರಿಸುವ ಉಪಕರಣಗಳಾದರೆ ಆಗ ಒಳ್ಳೆಯ ಆಲೋಚನೆಗಳು ನಮ್ಮೊಳಗೆ ಪ್ರವೇಶಿಸುವುವು. ಒಳ್ಳೆಯ ವ್ಯಕ್ತಿಯು ಕೆಟ್ಟ ಆಲೋಚನೆಗಳನ್ನು ಸ್ವೀಕರಿಸುವುದಿಲ್ಲ. ಕೆಟ್ಟವರಲ್ಲಿ ಕೆಟ್ಟ ಆಲೋಚನೆಗಳು ಒಳ್ಳೆಯ ಕ್ಷೇತ್ರವನ್ನೇ ಪಡೆಯುತ್ತವೆ" (ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂಪುಟ ೭, ಪುಟ ೨೩೮).